# ಸಿನಿಮಾ ಮತ್ತು ಸೆನ್ಸಾರ್

ಪುಸ್ತಕಗಳಿಗೆ, ಟಿ.ವಿ ಧಾರಾವಾಹಿಗಳಿಗೆ ಇಲ್ಲದ ಸೆನ್ಸಾರ್ ಮಂಡಳಿ, ಸಿನಿಮಾಕ್ಕೆ ಮಾತ್ರ ಇರುವುದೇಕೆ.. ಎನ್ನುವುದೊಂದು ಪ್ರಶ್ನೆ. ಇದು ಸಿನಿಮಾ ಎನ್ನುವ ಮಾಂತ್ರಿಕ ಮಾಧ್ಯಮ ನಮ್ಮ ಸಮಾಜದ ಮೇಲೆ ಆಳವಾಗಿ ಬೀರಿರುವ ಪರಿಣಾಮಕ್ಕೂ ಸಾಕ್ಷಿ; ಹಾಗೆಯೇ ನಮ್ಮ ಸಮಾಜ ಇನ್ನೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಏಕತ್ರವಾಗಿ ಮತ್ತು ಪರಿಪೂರ್ಣವಾಗಿ ಗ್ರಹಿಸುವ ಸಾಮರ್ಥ್ಯ ಹೊಂದಿಲ್ಲ ಎನ್ನುವುದಕ್ಕೂ ಸಾಕ್ಷಿ. ಸಿನಿಮಾ ಎನ್ನುವುದು ಕತ್ತಲೆ–ಬೆಳಕಿನ ಭ್ರಮಾಲೋಕವಾದರೂ, ಬಹುತೇಕರ ಪಾಲಿಗೆ ಅದು ಇವತ್ತಿಗೂ ನೈಜತೆಯ ಪ್ರತಿಬಿಂಬವೇ. ದೇವರು, ಧರ್ಮ, ಜಾತಿಗಳ ಹೆಸರಿನಲ್ಲಿ ಛಿದ್ರಗೊಂಡಿರುವ; ಸಂಸ್ಕೃತಿಯ ಹೆಸರಿನಲ್ಲಿ ಇನ್ನೂ ಅನೇಕ ಮೂಢನಂಬಿಕೆಗಳನ್ನು ಉಳಿಸಿಕೊಂಡು ಬಂದಿರುವ ನಮ್ಮ ಸಮಾಜದಲ್ಲಿ ಒಂದೆಡೆ ಸಿನಿಮಾ ನಟ–ನಟಿಯರೂ ದೇವರಾಗುವ ಪವಾಡ ನಡೆಯುತ್ತದೆ. ಇನ್ನೊಂದೆಡೆ ಸಿನಿಮಾದಲ್ಲಿ ನಿರ್ದೇಶಕನೊಬ್ಬ ಮಾಡುವ ಸಣ್ಣ ಆರೋಗ್ಯಕರ ದೃಷ್ಟಿಕೋನದ ಟೀಕೆಯೂ ದೈವಭಕ್ತರ ಕಣ್ಣಿಗೆ ಅಸಹನೀಯ ಸಾಂಸ್ಕೃತಿಕ ದಾಳಿಯಾಗಿ ಕಾಣಿಸುತ್ತದೆ. ವೈಜ್ಞಾನಿಕತೆ, ವೈಚಾರಿಕತೆಯ ಕೊರತೆ ಮತ್ತು ಮತ– ಧರ್ಮಗಳ ಕುರಿತ ಅತಿಭಾವುಕ ದೃಷ್ಟಿಕೋನವೇ ಇದಕ್ಕೆ ಕಾರಣ. ಹಾಗಾಗಿಯೇ ಬಹುಸಂಸ್ಕೃತಿಯ ನಾಡಿನಲ್ಲಿ ಸಿನಿಮಾ ಕೂಡಾ ಸೆನ್ಸಾರ್‌ಗೆ ಒಳಪಡಬೇಕಾದ ಅಗತ್ಯ ಉಂಟಾಗಿದೆ.

'ಪಿಕೆ' ಎನ್ನುವ ಹಿಂದಿ ಸಿನಿಮಾ ಇತ್ತೀಚೆಗೆ ಉಂಟು ಮಾಡಿರುವ ಕೋಲಾಹಲವನ್ನೇ ಗಮನಿಸಿ. ಹಾಗೆ ನೋಡಿದರೆ 'ಪಿಕೆ' ಅತ್ಯಂತ ಶ್ರೇಷ್ಠ ಸಿನಿಮಾ ಏನಲ್ಲ. ಈ ಚಿತ್ರದಲ್ಲಿ ನಕಲಿ ದೇವಮಾನವರ ಡಾಂಭಿಕತನವನ್ನು ಲೇವಡಿ ಮಾಡಲಾಗಿದೆ. 'ನಿಮ್ಮನ್ನು ಸೃಷ್ಟಿಸಿದ ದೇವರನ್ನು ಆರಾಧಿಸಿ. ಆದರೆ ನೀವು ಸೃಷ್ಟಿಸಿದ ದೇವರುಗಳನ್ನು ನಂಬಬೇಡಿ' ಎನ್ನುವ ಸರಳ ತತ್ವಜ್ಞಾನ ಈ ಸಿನಿಮಾದ್ದು. ಭಾರತೀಯ ಸಮಾಜಕ್ಕೆ ಇದೇನೂ ಹೊಸ ತತ್ವಜ್ಞಾನವಲ್ಲ. ಈ ನಾಡಿನಲ್ಲಿ ಶತಮಾನಗಳಿಂದ ಬಂದಿರುವ ಧಾರ್ಮಿಕ ಸುಧಾರಕರು, ಶರಣರು, ಸೂಫಿ, ಸಂತರು ಕೂಡಾ ಇದನ್ನೇ ಹೇಳಿದ್ದಾರೆ. ದೇವರ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯ, ಶೋಷಣೆ ಅತ್ಯಂತ ನಾಜೂಕಾಗಿರುವ ಇವತ್ತಿನ ಸಂದರ್ಭದಲ್ಲಿ, ಇಂತಹ ತತ್ವಜ್ಞಾನವನ್ನು ಜನಪ್ರಿಯ ಮಾಧ್ಯಮವಾದ ಸಿನಿಮಾದ ಮೂಲಕ ಹೇಳಿರುವುದು ಮೆಚ್ಚಬೇಕಾದ ಸಂಗತಿ. ದೇವರ ಹೆಸರಿನಲ್ಲಿ ಅವೈಜ್ಞಾನಿಕ ವೈರುಧ್ಯಗಳನ್ನು ಸೃಷ್ಟಿಸಿಕೊಂಡಿರುವ, ಅವುಗಳನ್ನು 'ಪ್ರಶ್ನಿಸಬಾರದ ನಿಜ' ಎಂದೇ ನಂಬಿರುವ ನಮ್ಮ ಸಮಾಜದಲ್ಲಿ ಇಂತಹ ಆರೋಗ್ಯಪೂರ್ಣ ಟೀಕೆಯ ಅಗತ್ಯ ಈಗ ಹಿಂದಿಗಿಂತ ಹೆಚ್ಚಿದೆ.

ಕನ್ನಡದಲ್ಲೂ ಸೆನ್ಸಾರ್ ಮಂಡಳಿಯ ಪಾತ್ರದ ಕುರಿತ ಹೊಸ ಚರ್ಚೆಯೊಂದು ಇದೇ ಸಂದರ್ಭದಲ್ಲಿ ಹುಟ್ಟಿಕೊಂಡಿದೆ. 'ಗಾಳಿಬೀಜ' ಎನ್ನುವ ಪ್ರಯೋಗಾತ್ಮಕ ಸಿನಿಮಾಕ್ಕೆ ಪ್ರಾದೇಶಿಕ ಸೆನ್ಸಾರ್ ಮಂಡಳಿ ಅನುಮತಿ ನಿರಾಕರಿಸಿ, ಮರುಪರಿಶೀಲನಾ ಸಮಿತಿಯ ಮುಂದೆ ಹೋಗಲು ಸೂಚಿಸಿರುವುದು ವಿವಾದ ಎಬ್ಬಿಸಿದೆ. 'ಸೆನ್ಸಾರ್ ಮಂಡಳಿಯ ಮಾನದಂಡಗಳ ಪ್ರಕಾರ ಈ ಸಿನಿಮಾಕ್ಕೆ ಸರ್ಟಿಫಿಕೇಟ್ ನೀಡಲು ಬರುವುದಿಲ್ಲ. ಇದು ಗುಣಮಟ್ಟದ ಸಿನಿಮಾ ಅಲ್ಲ. ಸೌಂದರ್ಯಪ್ರಜ್ಞೆ ಇರುವ ಮತ್ತು ಸಿನಿಮೀಯ ಗುಣಮಟ್ಟ ಹೊಂದಿಲ್ಲದ ಚಿತ್ರಗಳಿಗೆ ಅನುಮತಿ ನಿರಾಕರಿಸುವ ಹಕ್ಕು ಸೆನ್ಸಾರ್ ಮಂಡಳಿಗೆ ಇದೆ' ಎನ್ನುವುದು ಮಂಡಳಿಯ ವಾದ. ಇದನ್ನು ಪ್ರತಿಭಟಿಸಿ ಬೀದಿಗಿಳಿದು ಹೋರಾಟ ನಡೆಸಲು ಸಿನಿಮಾ ತಂಡ ನಿರ್ಧರಿಸಿದೆ.

> ಸಿನಿಮಾ ಎನ್ನುವುದು ನಿರ್ದೇಶಕನೊಬ್ಬನ ಸೃಜನಶೀಲ ಕೃತಿ. ಸಿನಿಮಾ ಹೀಗೆಯೇ ಇರಬೇಕು ಎಂದು ಹೇಳುವ ಅಧಿಕಾರ ಸೆನ್ಸಾರ್ ಮಂಡಳಿಗೆ ಇದೆಯೆ? ಸಿನಿಮಾದ ಸೌಂದರ್ಯಪ್ರಜ್ಞೆಯನ್ನು ನಿರ್ಧರಿಸುವ ಮಾನದಂಡಗಳೇನು? ಸಿನಿಮೀಯ ಗುಣಮಟ್ಟ ಎನ್ನುವುದು ಸಿನಿಮಾದ ತಾಂತ್ರಿಕ ಗುಣಮಟ್ಟಕ್ಕೆ ಮಾತ್ರ ಸಂಬಂಧಿಸಿದ್ದೆ ಅಥವಾ ಸಿನಿಮಾದ ಕಥೆಗೂ ಅನ್ವಯಿಸುತ್ತದೆಯೆ?

ಸಿನಿಮಾ ಎನ್ನುವುದು ನಿರ್ದೇಶಕನೊಬ್ಬನ ಸೃಜನಶೀಲ ಕೃತಿ. ಸಿನಿಮಾ ಹೀಗೆಯೇ ಇರಬೇಕು ಎಂದು ಹೇಳುವ ಅಧಿಕಾರ ಸೆನ್ಸಾರ್ ಮಂಡಳಿಗೆ ಇದೆಯೆ? ಸಿನಿಮಾದ ಸೌಂದರ್ಯಪ್ರಜ್ಞೆಯನ್ನು ನಿರ್ಧರಿಸುವ ಮಾನದಂಡಗಳೇನು? ಸಿನಿಮೀಯ ಗುಣಮಟ್ಟ ಎನ್ನುವುದು ಸಿನಿಮಾದ ತಾಂತ್ರಿಕ ಗುಣಮಟ್ಟಕ್ಕೆ ಮಾತ್ರ ಸಂಬಂಧಿಸಿದ್ದೆ ಅಥವಾ ಸಿನಿಮಾದ ಕಥೆಗೂ ಅನ್ವಯಿಸುತ್ತದೆಯೆ?– ಮುಂತಾದ ಪ್ರಶ್ನೆಗಳನ್ನು ಈ ಹೊಸ ವಿವಾದ ಹುಟ್ಟುಹಾಕಿದೆ. ಇದೇ ವೇಳೆ, 'ಗಾಳಿಬೀಜ' ಸಿನಿಮಾ ತಂಡ ಪುನರ್‌ಪರಿಶೀಲನೆಗೆ ಹೋಗುವುದು ಬಿಟ್ಟು ಬೀದಿಹೋರಾಟಕ್ಕೆ ಇಳಿಯುವುದು ಕೂಡಾ ತಮಾಷೆಯಾಗಿದೆ. ಪುನರ್‌ಪರಿಶೀಲನೆ ಸಮಿತಿಯೂ ನಿರಾಕರಿಸಿದರೆ, ಟ್ರಿಬ್ಯೂನಲ್‌ನಲ್ಲಿ ನ್ಯಾಯ ಕೇಳಬಹುದು. ಅಲ್ಲೂ ನ್ಯಾಯ ಸಿಗದಿದ್ದರೆ ಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಈ ಅವಕಾಶಗಳನ್ನು ಉಪಯೋಗಿಸುವುದು ಜಾಣತನ. ಈಗ ಇರುವ ಸಿನಿಮಾಟೊಗ್ರಫಿ ಕಾಯ್ದೆ 1952ರಷ್ಟು ಹಳೆಯದಾಗಿದ್ದು, ಅದರಲ್ಲಿ ಹಲವು ತಿದ್ದುಪಡಿಗಳನ್ನು ಮಾಡಬೇಕಾದ ಅಗತ್ಯವಿದೆ ಎನ್ನುವುದನ್ನೂ ಈ ವಿವಾದ ಎತ್ತಿತೋರಿದೆ. ಸರಕಾರಿ ಕೃಪಾಪೋಷಿತ ನಿಯಂತ್ರಣಗಳನ್ನೇ ನೆಚ್ಚಿಕೊಳ್ಳುವ ಪರಿಸ್ಥಿತಿಯನ್ನು ಬದಲಾಯಿಸಿ, ಸ್ವನಿಯಂತ್ರಣದ ವ್ಯವಸ್ಥೆಯತ್ತ ನಮ್ಮ ಸಿನಿಮಾ ಜಗತ್ತು ಹೊರಳಿಕೊಳ್ಳಲು ಇನ್ನೆಷ್ಟು ಸಮಯ ಬೇಕಾಗುವುದೋ?

■ ಬಿ.ಎಂ.ಹನೀಫ್

